
ಕಾರಣ ಬೇರೆ ಒಂದು ಇರುವಂತೆ ತೋರುತ್ತದೆ. ಸಮಾಜದಲ್ಲಿ ಬಾಳುತ್ತಿರುವ ಎಲ್ಲರ ಒಳಜೀವವೂ ಆಯಾ ಸಮಾಜ ಅಪೇಕ್ಷಿಸುವ ವಿನಯಾದರ್ಶದ ಕಡೆಗೆ ಒಂದಲ್ಲ ಒಂದು ಪ್ರಮಾಣದಲ್ಲಿ ಹೊಂದಿಕೊಳ್ಳಲು ತುಡಿಯುತ್ತಿರುತ್ತದೆ. ಏಕೆಂದರೆ ಸಮಾಜಜೀವಿಯಾದ ಮನುಷ್ಯನಲ್ಲಿ ಸಮಾಜದಿಂದ ಧಿಕ್ಕರಿಸಲ್ಪಟ್ಟು ಒಂಟಿಯಾಗಲಾರದ, ಅನಾಥನಾಗಲಾರದ ಒಳದಿಗಿಲೊಂದು ಬಹುಶಃ ಮೂಲಪ್ರವೃತ್ತಿಗಳಷ್ಟೇ ಅಥವಾ ಮೂಲಪ್ರವೃತ್ತಿಗಳ ಒಂದಂಶವಾಗಿಯೇ ಇರುತ್ತದೆಯೆಂದು ತೋರುತ್ತದೆ. ಮನುಷ್ಯನ ಈ ಆತ್ಮರಕ್ಷಣಾ ಪ್ರವೃತ್ತಿಗೆ ಕವಿ, ಸಾಹಿತಿಗಳೂ ಸಾಮಾನ್ಯವಾಗಿ ಅಪವಾದವಾಗಿರಲಾರರು. ಅದರಲ್ಲೂ ಜನಪ್ರಿಯ ಸಾಹಿತಿ ಅಪವಾದವಾಗಿರಲಾರ. ಈ ಆತ್ಮರಕ್ಷಣಾ ಪ್ರವೃತ್ತಿ ಪ್ರಾಣಿಸಹಜವಾದದ್ದು. ಮನುಷ್ಯನೂ ಮೂಲತಃ ಪ್ರಾಣಿಯೇ ಆಗಿರುವುದರಿಂದ ಅವನಲ್ಲಿಯೂ ಆ ಪ್ರವೃತ್ತಿ ಇದ್ದೇ ಇರುತ್ತದೆ, ಆದರೆ ಇತರ ಪ್ರಾಣಿಗಳಲ್ಲಿ ಕಂಡುಬರುವ ಆತ್ಮಹತ್ಯಾ ಪ್ರವೃತ್ತಿಯೂ ಮನುಷ್ಯನಲ್ಲಿ ಇರುತ್ತದೆ. ಜೀವನದ ಘೋರವನ್ನು ಕಂಡು, ಇಲ್ಲವೇ ನೆನೆದು, ಅದನ್ನು ಎದುರಿಸಲಾರದ ದಿಗಿಲಿನಿಂದ ತನ್ನನ್ನೇ ತಾನು ಕೊಂದುಕೊಳ್ಳುವ ದುರ್ಬಲ ಚೇತಸರನ್ನು ಕುರಿತಂತೆ ಈ ಸಂದರ್ಭದಲ್ಲಿ ನಾವು ಯೋಚಿಸಬೇಕಾಗಿಲ್ಲ. ಆದರೆ ಸಮಾಜದಲ್ಲಿ ಅಪವಾದರೂಪದ ಪ್ರಬಲ ಚೇತಸ ತಾನು ಕಂಡ ಸತ್ಯಕ್ಕಾಗಿ, ಅದರ ಸ್ಥಾಪನೆಗಾಗಿ ಪ್ರಾಣವನ್ನು ಪಣವಾಗಿಟ್ಟು ಹೋರಾಡುವುದನ್ನು. ಹುತಾತ್ಮನಾಗುವುದನ್ನು ಮಾನವಚರಿತ್ರೆಯ ಉದ್ದಕ್ಕೂ ಕಂಡಿದ್ದೇವೆ. ತಾನು ಕಂಡ ಸತ್ಯಕ್ಕೂ ತನ್ನ ಸುತ್ತಮುತ್ತಲಿನ ಸಮಾಜದ ಮೌಲ್ಯಾದರ್ಶಗಳಿಗೂ ಇರುವ ಪರಸ್ಪರ ವಿರೋಧಾಭಾಸವನ್ನು ಕಂಡೂ ಕಂಡೂ, ತಾನು ಕಂಡ ಸತ್ಯವನ್ನು ಸ್ಥಾಪಿಸಲು ಹೊರಡುವುದರಲ್ಲಿ ಇರುವ ಅಪಾಯವನ್ನು ತಿಳಿದೂ ತಿಳಿದೂ ಆತ ಹೋರಾಡುವುದಕ್ಕೆ ಸಿದ್ಧನಾಗುವ ನೈತಿಕ ಧೈರ್ಯವನ್ನು ತೋರಿಸುತ್ತಾನೆ. ಯಾವುದನ್ನು ಸಮಾಜದ ಕ್ಷೇಮದ ಹೆಸರಿನಲ್ಲಿಯೇ ಸಮಾಜ ವಿರೋಧಿಸುತ್ತದೋ, ಅದನ್ನೇ ಸಮಾಜದ ಕ್ಷೇಮದ ಹೆಸರಿನಲ್ಲಿಯೇ ಆತ ಸ್ಥಾಪಿಸಲು ಹೊರಟಿರುತ್ತಾನೆ. ಇಂಥ ಪ್ರಬಲಚೇತಸರಿಂದಲೇ ಮಾನವನಾಗರಿಕತೆ ಹೊಸ



ಕಲೆ: ಬಸವರಾಜ ಕಲೆಗಾರ

ಹೊಸ ತೇಜಸ್ಸನ್ನು, ಹೊಸ ಹೊಸ ಆಯಾಮವನ್ನು ಪಡೆದುಕೊಳ್ಳುತ್ತ ಬಂದಿದೆ. ಕವಿ, ಸಾಹಿತಿಗಳಲ್ಲಿಯೂ ಅಂಥ ಪ್ರಬಲಚೇತಸರು ಇರುತ್ತಾರೆ. ಅಂಥ ಸಾಹಿತಿ ತನ್ನ ಪ್ರತಿಭೆಯ ಮೂಲಕ ಹೊಸಹೊಸತನ್ನು ಕಾಣುತ್ತಾನೆ. ತನ್ನ ಪ್ರಜ್ಞೆಯನ್ನು ಹೊರಗಿನ ಎಲ್ಲ ಉಪಾಧಿಗಳ ಹಂಗಿನಿಂದ ಮುಕ್ತಗೊಳಿಸಿಕೊಂಡು ತನ್ನ ಸೃಜನಶೀಲ ಚೈತನ್ಯಕ್ಕೆ ಸಂಪೂರ್ಣವಾಗಿ ಒಡ್ಡಿಕೊಳ್ಳುತ್ತಾನೆ. ಹಾಗೆ ಒತ್ತಿಕೊಂಡು ಸೃಜನಶೀಲ ಚೈತನ್ಯದ ನಿರ್ದೇಶನದಲ್ಲಿ ತಾನು ಕಂಡ ಅನುಭವಸತ್ಯವನ್ನು ಭಾಷೆಯಲ್ಲಿ ಸಾಕಾರ ಗೊಳಿಸಲು ಹೋರಾಡುತ್ತಾನೆ. ಕವಿ ಹೀಗೆ ತನ್ನ ಅನುಭವಸತ್ಯವನ್ನು ಗೌರವಿಸುವುದರಲ್ಲಿ, ತನ್ನ ಸೃಜನಶೀಲ ಚೈತನ್ಯಕ್ಕೆ ತನ್ನನ್ನು ಅರ್ಪಿಸಿಕೊಳ್ಳುವುದರಲ್ಲಿ ಪ್ರಕಟವಾಗುವ ವಿನಯವೇ 'ಸಾಹಿತ್ಯದಲ್ಲಿ ವಿನಯ' ಎಂದು ನಾನು ತಿಳಿಯುತ್ತೇನೆ.

ಆದರೆ ಸಾಹಿತ್ಯದಲ್ಲಿ ಪ್ರಕಟವಾಗುವ ಪ್ರಕಟವಾಗಬೇಕಾದ ವಿನಯಕ್ಕೆ ಇದೊಂದೇ ಮುಖ ಇದ್ದರೆ ಅದು ಪೂರ್ಣವಿನಯ ಅಥವಾ ಆದರ್ಶವಿನಯ ಆಗುವುದಿಲ್ಲ. ಈ ವಿನಯವನ್ನು ಸಾಹಿತಿಯಲ್ಲಿ ಪ್ರಕಟವಾಗಬೇಕಾದ ಆದರ್ಶವಿನಯದ